Sri B. BASAVALINGAPPA.—That we will do.

FIRST REPORT OF THE COMMITTEE ON PUBLIC UNDERTAKINGS—PRESENTATION.

Sri M. S. KRISHNAN (Malleswaram).—I present the first of the Committee on Public Undertakings on REMCO.

Madam SPEAKER.—The report is presented.

AFFAIRS OF A MATH IN RAICHUR

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮೊನ್ನೆ ಸಾರಿಗೆ ಮಂತ್ರಿಯವರು ಹಕ್ಕುಭಾದ್ಯತೆಯ ನಿರ್ಣಯ ಚರ್ಚೆ ಮಾಡುವ ಕಾಲದಲ್ಲಿ ರಾಯಚೂರಿನಲ್ಲಿ ಒಂದು ಮಠಕ್ಕೆ ಸೇರಿದ ವಿಚಾರ ಹೇಳಿದ್ದಾರೆ. ಹಾಗೇ ಹೇಳಿರುವುದು ಸರಿಯಲ್ಲವೆಂದು ಅಲ್ಲಿಯ ಮಠದ ಸ್ವಾಮಿಗಳು ಪತ್ರ ಬರೆದಿದ್ದಾರೆ.

ಅಧ್ಯಕ್ಷರು.—ಅದನ್ನು ಅಟೆನ್‌ಶನ್ ನೋಟೀಸ್ ಆಗಿ ಪರಿವರ್ತನೆ ಮಾಡುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—ನೀವು ಅದನ್ನು ಕಾಲಿಂಗ್ ಅಟೆನ್‌ಶನ್ ನೋಟೀಸ್ ಆಗಿ ಮಾಡಿದರೆ ಸಾಲದು.

ಶ್ರೀ ಕಾಗೋಡು ತಿಮ್ಮಪ್ಪ.—ಸರ್ಕಾರದವರು ಏನು ನಿಗದಿ ಮಾಡಿದ್ದಾರೆ ಅದಕ್ಕೆ ಅವರು ಕೊಡುವುದಕ್ಕೆ ತಯಾರಾಗಿದ್ದಾರೆಂದು ಹೇಳಿಕೆಯಲ್ಲಿ ಮಂತ್ರಿಯವರು ಹೇಳಿರುವುದು ಸರಿಯಲ್ಲ. ಅದು ಸರಿಯಲ್ಲವೆಂದು ಸ್ವಾಮಿಗಳು ಪತ್ರ ಬರೆದಿದ್ದಾರೆ. ಅದರ ಬಗ್ಗೆ ಅವರು ಸರಿಯಾದ ಹೇಳಿಕೆ ಕೊಡದಿದ್ದರೆ, ನಾವು ಪುನಃ ಹಕ್ಕುಭಾದ್ಯತೆಯ ನಿರ್ಣಯವನ್ನು ಕಳುಹಿಸಬೇಕಾಗುತ್ತದೆ.

ಅಧ್ಯಕ್ಷರು.—ಮಂತ್ರಿಯವರು ಈಗ ಇಲ್ಲ; ಬಂದ ಮೇಲೆ ಅವರು ಏನಾದರೂ ಉತ್ತರ ಹೇಳುತ್ತಾರೋ ಎಂದು ನೋಡೋಣ.

1-30 ಪಿ.ಎಮ್

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ; ನಾನು ತಮಗೆ ರೂಲ್ 312 ಪ್ರಕಾರ ನರಸಿಂಹ ರಾಜಪುರ ತಾಲ್ಲೂಕಿನಲ್ಲಿ ಒಬ್ಬ ಗೇಣಿದಾರನ ಮನೆಯೊಳಗೆ ನುಗ್ಗಿ.....

ಅಧ್ಯಕ್ಷರು.—ತಾವು ನೆನ್ನೆ ಆ ವಿಷಯ ಕಳುಹಿಸಿದ್ದೀರಿ. ಅದನ್ನು ಸರ್ಕಾರದ ಗಮನಕ್ಕೆ ತಂದಿದೆ. ಅವರು ವಿಚಾರಮಾಡಿ ನಮ್ಮ ಆಫೀಸಿಗೆ ತಿಳಿಸಿದನಂತರ ಅದನ್ನು ಅಜೆಂಡಾದಲ್ಲಿ ಸೇರಿಸಲಾಗುತ್ತದೆ. ಅಲ್ಲಿಂದ ವಿಚಾರ ಬರಲಿ. ಹೀಗೆತಾವು ಏಕಾಏಕಿ ವಿಷಯವನ್ನೆತ್ತಿದರೆ ಸರ್ಕಾರದವರು ಹೇಗೆ ಉತ್ತರ ಕೊಡಲು ಸಾಧ್ಯ?

(ಎಪಿಸೋಡ್ ಆಫ್ ಶ್ರೀಮತಿ ಸುಮಿತ್ರಾ ದೇಸಾಯಿ)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಮಾನ್ಯ ಅಧ್ಯಕ್ಷರೇ; ನೆನ್ನೆಯ ದಿವಸ ಸಭೆಯಲ್ಲಿ ಒಬ್ಬ ರಾಜ್ಯ ಸಚಿವರಿಗೆ ಸಂಬಂಧಪಟ್ಟ ಒಂದು ವಿಚಾರದಲ್ಲಿ ಇಲ್ಲಿ ಏನು ಒಂದು ವಿಷಯ ಸುಮಿತ್ರಾ ದೇಸಾಯಿ ಅನ್ನತಕ್ಕವರ ಬಗ್ಗೆ ನಡೆಯಿತು. ಅವರು ಬೊಂಬಾಯಿನಿಂದ ಬಂದವರು. ಆದರೆ ಇಲ್ಲಿ ನಮ್ಮ ಹೋಂ ಮಿನಿಸ್ಟರ್ ನನಗೆ ಆ ವಿಚಾರವೇ ಗೊತ್ತಿಲ್ಲ ಎಂದು ಹೇಳಿದ್ದಾರೆ. ಇದನ್ನು ಹೇಗೆ ನಂಬುವುದು? ರಾಜ್ಯ ಸಚಿವರಾದ ಕಿತ್ತೂರ್ ಅವರ ಮನೆಯಲ್ಲಿ ಒಬ್ಬ ಹೆಣ್ಣುಮಗಳು ಅದೃಶ್ಯರಾಗಿದ್ದಾರೆ. ಇದರ ಬಗೆ ಒಂದು ಹೇಳಿಕೆಯನ್ನು ಸಭೆಯ ಮುಂದೆ ಇಡುತ್ತೇವೆಂದು ಹೇಳಿದ್ದವರು ಈಗ ಈ ವಿಷಯವನ್ನು ಮುಚ್ಚಿಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತಿದ್ದಾರೆಂಬ ವದಂತಿಯನು ಕೇಳಿ ನನಗೆ ಬಹಳ ಭಯವಾಗುತ್ತಿದೆ.